# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 05.07.2022 ಮಂಗಳವಾರ ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102.ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಸೈಯದ್ ಸಲಾಂ | ಸದಸ್ಯರು | 9900388075 |
| 4 | ಶ್ರೀ ಶ್ರೀನಿವಾಸ್ ರೆಡ್ಡಿ | ಸದ್ಯಸರು | 9845284088 |
| 5 | ಶ್ರೀ ಚಂದ್ರ ರೆಡ್ಡಿ | ಸದ್ಯಸರು | 9900115285 |
| 6 | ಶ್ರೀ ಕೆ ಗೋಪಿನಾಥ್ | ಸದ್ಯಸರು | 9243111520 |
| 7 | ಶ್ರೀ ಕೇಶವ್ ರೆಡ್ಡಿ | ಸದ್ಯಸರು | 994526571 |
| 8 | ಶ್ರೀ ಉಮೇಶ್.ಎಸ್. | ಸದಸ್ಯರು | 9342509899 |
| 9 | ಶ್ರೀ ಟಿ.ಎ ಮೌಲಸಾಬ್ | ಸಾರ್ವಜನಿಕರು | 990034140 |
| 10 | ಶ್ರೀ ಎನ್.ಜೆ ಮ್ಯಾಥ್ಯೂ | ಮುನೇಶ್ವರ ನಗರ, ಕಲ್ಯಾಣ ಸಂಘ | 9900134754 |
| 11 | ಶ್ರೀ ಗಜೇಂದ್ರ | ಸಾರ್ವಜನಿಕರು | 9632218669 |
| 12 | ಶ್ರೀ ವಿಕಾಸ್ ಡಿ. ಎಸ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 13 | ಶ್ರೀ ಸಿರಾಜ್ ಅಹಮ್ಮದ | ಎ.ಎಸ್.ಐ ಸಂಚಾರಿ ಪೋಲಿಸ್ ಠಾಣೆ ಎಲೆಕ್ಟ್ರಾನಿಕ್ ಸಿಟಿ | 9343585394 |
| 14 | ಶ್ರೀ ಕೆ.ಕೆ ಮಂದಪ್ಪ | ಎ.ಎಸ್.ಐ ಬಂಡೇಪಾಳ್ಯ ಪೋಲಿಸ್ ಠಾಣೆ | 9916742606 |
| 15 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾ ಸಂ. 174 | 9844629911 |
| 16 | ಶ್ರೀ ಹೊನ್ನೂರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 9480688490 |
| 17 | ಶ್ರೀ ರಫಿ | ಮೆಕಾನಿಕಲ್ ಇಂಜಿನಿಯರ್ (ಕೆ.ಸಿ.ಡಿ.ಸಿ) ಘಟಕ | 9108002673 |
| 18 | ಶ್ರೀ ಉಮಾಶಂಕರ್ | ಕೆ.ಸಿ.ಡಿ.ಸಿ ಘಟಕ | 9844431427 |
| 19 | ಶ್ರೀ ಜಟಪ್ಪ | ವಿಲೇಜ್ ಅಕೌಂಟೆಂಟ್ | 9741944144 |
| 20 | ಶ್ರೀ ಎಸ್.ಜಿ. ನಾರಾಯಣಪ್ಪ | ತೋಟಗಾರಿಕೆ ನಿರೀಕ್ಷಕರು | 9739063379 |
| 21 | ಶ್ರೀ ನಿಜಾಮ್ | ಬೀದಿ ದೀಪ ನಿರ್ವಾಹಕರು | 9611122076 |

(2......)

Scanned with

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು.

- <u>ಘನತ್ಯಾಜ್ಯ ನಿರ್ವಹಣೆ ಮತ್ತು ಕೆ.ಸಿ.ಡಿ.ಸಿ ಘಟಕ</u>

1. ಹಿಂದಿನ ಸಭೆಯಲ್ಲಿ ಸಾರ್ವಜನಿಕರು, ಸ್ಥಳೀಯರು ಮತ್ತು ಸದಸ್ಯರು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಾಗಿದ್ದ ರಫಿ ಮತ್ತು ಉಮಾಶಂಕರ್ ಕೆ.ಸಿ.ಡಿ.ಸಿ ಘಟಕ ಇವರಲ್ಲಿ ಕೆಟ್ಟ ವಾಸನೆ ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಸ್ತಾಪಿಸಿದರು. ಈ ಬಗ್ಗೆ ರಫಿ ಮೆಕಾನಿಕಲ್ ಇಂಜಿನಿಯರ್ ಕೆ.ಸಿ.ಡಿ.ಸಿ ರವರು ಘಟಕದಿಂದ ಗ್ಲೊಬ್ಬರ್ ಅನಿಲಾ ಹೊರಬರದಂತೆ (Bio Filtter CNG Composting) ಗಾಗಿ ಪ್ರಸ್ತಾಪಿಸಿದ್ದು, ಇದನ್ನು ಅನುಷ್ಠಾನಗೊಳಿಸಲು ಸುಮಾರು 6 ತಿಂಗಳ ಪ್ರಕ್ರಿಯೆ ಆದ ನಂತರ ಕೆಟ್ಟ ವಾಸನೆ ನಿಯಂತ್ರಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಶ್ರೀ ಸೈಯದ್ ಸಲಾಂ, ಕೇಶವ್ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಒಟ್ಟು ಎಷ್ಟು ತ್ಯಾಜ್ಯ ಘಟಕಕ್ಕೆ ಬರುತ್ತಿರುವುದಾಗಿ ಪ್ರಸ್ತಾಪಿಸಿದ್ದು, ಅದಕ್ಕೆ 100 ಟನ್ ತ್ಯಾಜ್ಯ ಸಾಮರ್ಥ್ಯ ಇರುವ ಘಟಕಕ್ಕೆ 200 ಟನ್ ತ್ಯಾಜ್ಯವು ಬರುತ್ತಿರುವುದಾಗಿ ರಫಿ ರವರು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಮುನೇಶ್ವರ ದೇವಸ್ಥಾನ ಮುಂಭಾಗದಲ್ಲಿ ತ್ಯಾಜ್ಯವನ್ನು ಸುರಿಯುತ್ತಿರುವುದಾಗಿ ಇದರಿಂದ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ, ಸಾರ್ವಜನಿಕರಿಗೆ & ಸ್ಥಳೀಯರಿಗೆ ದುರ್ವಾಸನೆಯಿಂದ ತೀವ್ರ ಉಸಿರಾಟಕ್ಕೆ ತೊಂದರೆ ಅನುಭವಿಸುತ್ತಿರುವುದಾಗಿ ಶ್ರೀ ಕೇಶವ ರೆಡ್ಡಿ ಸದಸ್ಯರು ತೀವ್ರವಾಗಿ ಆಕ್ಷೇಪಿಸಿ, ಇದನ್ನು ಕೂಡಲೇ ತೆರವುಗೊಳಿಸುವಂತೆ ಸಭೆಗೆ ಪ್ರಸ್ತಾಪಿಸಿದರು. ಈ ಬಗ್ಗೆ ಉಮಾಶಂಕರ ಮತ್ತು ರಫಿ ರವರು ಒಂದು ವಾರದೊಳಗೆ ತ್ಯಾಜ್ಯವನ್ನು ತೆರವುಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.
3. ಕೆ.ಸಿ.ಡಿ.ಸಿ ಘಟಕದಿಂದ ದುರ್ವಾಸನೆಯನ್ನು ನಿಯಂತ್ರಿಸಲು Lemon Cross Spray ಸಿಂಪಡಿಸುವಂತೆ ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ರಫಿ ರವರು Lemon Cross Spray ಗಾಗಿ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಶಿಫಾರಸ್ಸು ಮಾಡಿರುವುದಾಗಿ ಸಭೆಗೆ ತಿಳಿಸಿದರು.

- <u>ಬೀದಿ ದೀಪ (ವಿದ್ಯುತ್) :-</u>

1. ವಾರ್ಡ್ ವ್ಯಾಪ್ತಿಯ ಸೋಮಸುಂದರಪಾಳ್ಯ, ಸಾಯಿರಾಮ ಶಾಲೆಯ ಎದುರುಗಡೆ ಬೀದಿ ದೀಪಗಳ ತಂತಿಗಳು ನೆತ್ತಾಡುತ್ತಿದ್ದು, ಸದರಿ ರಸ್ತೆಯಲ್ಲಿ ಓಡಾಡುತ್ತಿರುವ ಶಾಲಾ ಮಕ್ಕಳಿಗೆ, ಸ್ಥಳೀಯರಿಗೆ, ಸಾರ್ವಜನಿಕರಿಗೆ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು ಹಾಗೂ ಅನಾಹುತ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ಸಭೆಗೆ ಶ್ರೀ ಉಮೇಶ್ ಮತ್ತು ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ತಿಳಿಸಿರುತ್ತಾರೆ.
2. ಹಿಂದಿನ ಹಲವು ಸಭೆಗಳಲ್ಲಿ ಪ್ರಸ್ತಾಪಿಸಿದಂತೆ ಇದುವರೆಗೂ ಬೀದಿ ದೀಪಗಳಿಗೆ ಟೈಮರ್ ಅಳವಡಿಸಿರುವುದಿಲ್ಲವೆಂದು ಸಭೆಯಲ್ಲಿ ಎಲ್ಲಾ ಸದಸ್ಯರು ಆಕ್ಷೇಪಿಸಿರುತ್ತಾರೆ ಹಾಗೂ ಬೀದಿ ದೀಪಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಮತ್ತು ಸಂಜೆ ವೇಳೆಯಲ್ಲಿ ವಾರ್ಡ್ ವ್ಯಾಪ್ತಿಯ ಎಲ್ಲಾ ಬೀದಿ ದೀಪಗಳ ಪರಿಶೀಲನೆ ನಡೆಸುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ರಮೇಶ ರವರ ಪರವಾಗಿ ಶ್ರೀ ನಿಜಾಮ್ ಬೀದಿ ದೀಪ ನಿರ್ವಾಹಕರು ಕ್ರಮ ಕೈಗೊಳ್ಳವುದಾಗಿ ತಿಳಿಸಿದರು.

- <u>ಬೆಸ್ಕಾಂ :-</u>

1. ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ಮುಖ್ಯ ರಸ್ತೆ, ಉಜ್ವಲ್ ಫ್ಯಾಕ್ಟರ್ ಹತ್ತಿರ & ಹೊಸಪಾಳ್ಯ ಮುಖ್ಯಯಿಂದ ಕೂಡ್ಲು ಮುಖ್ಯ ರಸ್ತೆಯವರೆಗೆ ರಸ್ತೆಯ ಅಗಲ ಕಿರಿದಾಗಿದ್ದು, ಹಾಗೂ ಈ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿ ಇರುವುದರಿಂದ, ರಸ್ತೆಯನ್ನು ಅಗಲೀಕರಣ ಮಾಡಲು ರಸ್ತೆಯ ಬದಿಗಳಲ್ಲಿ ಅಳವಡಿಸಿರುವ ಕಂಬಗಳನ್ನು ತೆರವುಗೊಳಿಸಿ ಸ್ಥಳಾಂತರ ಮಾಡಲು ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ರವರು ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

(3.....)

Scanned with

- <u>ಬೃಹತ್ ಮಳೆ ನೀರುಗಾಲುವೆ :-</u>

1. ಮಂಗಮ್ಮನಪಾಳ್ಯ ವ್ಯಾಪ್ತಿಯ ಕೆರೆಗಳ ಹತ್ತಿರ, ರಾಜುಕಾಲುವೆ ತುಂಬಿ ರಸ್ತೆಯ ಮೇಲ್ಭಾಗದಲ್ಲಿ ನೀರು ಹರಿಯುತ್ತಿರುವುದಾಗಿ ಹಾಗೂ ಅಯ್ಯಪ್ಪ ದೇವಸ್ಥಾನದ ಅಪಾರ್ಟಮೆಂಟ್ ಹತ್ತಿರ ರಾಜುಕಾಲುವೆಯಲ್ಲಿ ಹೂಳೇತ್ತಲು ಸಭೆಯಲ್ಲಿ ವಾರ್ಡ್ ಸದಸ್ಯರು ಪ್ರಸ್ತಾಪಿಸಿದರು. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಬೃಹತ್ ನೀರುಗಾಲುವೆ ರವರು ಈಗಾಗಲೇ ಎಲ್ಲಾ ಚರಂಡಿಗಳಲ್ಲಿ ಹೂಳೇತ್ತಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

- <u>ರಾಜಸ್ವ ಇಲಾಖೆ (ರೆವಿನ್ಯೂ)</u>

1. ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗವನ್ನು ಕೆಲವು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದು, ಹಾಗೂ ಸರ್ವೆ ಸಂಖ್ಯೆ: 43ರ 3.00 ಎಕರೆ ಸರ್ಕಾರಿ ಜಮೀನಿನಲ್ಲಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. ಈ 3.00 ಎಕರೆ ಜಮೀನಿನಲ್ಲಿ ಶ್ರೀ ರಾಮ ದೇವಸ್ಥಾನವನ್ನು 1.00 ಎಕರೆ ಜಮೀನನ್ನು ಗುರುತಿಸಿ ಕೊಡಲು ರಾಜಸ್ವ ಇಲಾಖೆಗೆ ಅನೇಕ ಬಾರಿ ಪತ್ರ ಬರೆಯಲಾಗಿದ್ದು. ಈ ಬಗ್ಗೆ ರಾಜಸ್ವ ಇಲಾಖೆ ಅಧಿಕಾರಿ ಸಿಬ್ಬಂದಿ ವರ್ಗದವರು ನಿರ್ಲಕ್ಷ ಮಾಡುತ್ತಿರುವುದಾಗಿ ಶ್ರೀ ಶ್ರೀನಿವಾಸ ರೆಡ್ಡಿ. ಸೈಯದ್ ಸಲಾಂ ಸದಸ್ಯರು ರವರು ತೀವ್ರವಾಗಿ ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಜಟಪ್ಪ ವಿಲೇಜ್ ಅಕೌಟೆಂಟ್ ರವರು ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

- <u>ಸಂಚಾರಿ ವಿಭಾಗ (ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ)</u>

1. ವಾರ್ಡ್ ವ್ಯಾಪ್ತಿಯ ಮುನೇಶ್ವರ ಬಡಾವಣೆಯಲ್ಲಿ Heavy container Truck ಗಳು ರಸ್ತೆಯ ಬದಿಗಳಲ್ಲಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ಅಡಚಣೆಯಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ಶ್ರೀ ಎನ್.ಜೆ ಮ್ಯಾಥ್ಯ ರವರು ತಂದಿರುತ್ತಾರೆ. ಈ ಬಗ್ಗೆ ಶ್ರೀ ಸಿರಾಜ್ ಅಹಮ್ಮದ ಎ.ಎಸ್.ಐ ಸಂಚಾರಿ ಪೋಲಿಸ್ ಠಾಣೆ ಎಲೆಕ್ಟ್ರಾನಿಕ್ ಸಿಟಿ ರವರು ಸುಮಾರು 15 ದಿನಗಳ ಕಾಲ ಒಂದೇ ಸ್ಥಳದಲ್ಲಿ ವಾಹನಗಳು ನಿಲ್ಲಿಸಿದರೆ ಅಂತಹ ವಾಹನಗಳನ್ನು ಕಾನೂನು ಸುವ್ಯವಸ್ಥೆ ವಿಭಾಗ ಇಲಾಖೆಯಿಂದ ವಶಪಡಿಸಿಕೊಳ್ಳಬಹುದಾಗಿರುತ್ತದೆ ಮತ್ತು No Parking ಹಾಗೂ Unclaimed Vehicle ಗಳನ್ನು ಸಂಚಾರಿ ವಿಭಾಗದಿಂದ ವಶಪಡಿಸಿಕೊಳ್ಳಲಾಗುವುದೆಂದು ಸಭೆಗೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯ ಮುನೇಶ್ವರ ಬಡಾವಣೆಯ 4ನೇ ಅಡ್ಡ ರಸ್ತೆಯಲ್ಲಿ 1 ಅಡಿ ರಸ್ತೆ ಉಬ್ಬು ನಿರ್ಮಿಸಿರುವುದರಿಂದ ದ್ವಿ-ಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು. ಇದನ್ನು ಕೂಡಲೇ ತೆರವುಗೊಳಿಸುವಂತೆ ಶ್ರೀ ಉಮೇಶ್ ಮತ್ತು ಶ್ರೀ ಎನ್.ಜೆ ಮ್ಯಾಥ್ಯೂ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿರುತ್ತಾರೆ.

- <u>ಕಾಮಗಾರಿ ಇಲಾಖೆ :-</u>

1. ಮಂಗಮ್ಮನಪಾಳ್ಯ ವ್ಯಾಪ್ತಿಯ ಸರ್ವೆ ಸಂಖ್ಯೆ: 45/1, ಬಂಡೇಪಾಳ್ಯ ರಾಜುಕಾಲುವೆ ಮೇಲ್ಭಾಗದಲ್ಲಿ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ ಶ್ರೀ ಸೈಯದ್ ಸಲಾಂ, ಸದಸ್ಯರು ವಾರ್ಡ್ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಸಹಾಯಕ ಅಭಿಯಂತರರು, ವಾರ್ಡ್ ಸಂ. 190 ರವರು ಸದರಿ ಸರ್ವೆ ಸಂಖ್ಯೆ: 45/1, ಮಾಲೀಕರಿಗೆ ಕಟ್ಟಡವನ್ನು ತೆರವುಗೊಳಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ ಹಾಗೂ ಕೆಲಸವನ್ನು ನಿಲ್ಲಿಸಿರುವುದಾಗಿ ಸಭೆಗೆ ತಿಳಿಸಿರುತ್ತಾರೆ.

(4.....)

Scanned with

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalachalu

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with